# ಕೇಶವಿನ್ಯಾಸದಿಂದ ಕ್ಯಾನ್ವಾಸ್‌ವರೆಗೆ...

■ ರಾಮಕೃಷ್ಣ ಸಿದ್ರಪಾಲ



‘ನನ್ನ ಸಲೂನ್ ಗೋಡೆಯ ಮೇಲೆ ನಾನೇ ಬರೆದ ಒಂದಿಷ್ಟು ಪೇಂಟಿಂಗ್ಸ್‌ಗಳನ್ನು ನೇತು ಹಾಕಿದ್ದೆ. ಶೇವಿಂಗ್–ಕಟಿಂಗ್ ಮಾಡಿಸಿಕೊಳ್ಳಲು ಬಂದ ಗ್ರಾಹಕರು ಅವುಗಳನ್ನು ನೋಡುತ್ತಿದ್ದರು. ಒಂದು ದಿನ ಬರ್ಮುಡಾದಲ್ಲಿ ಬಂದಿದ್ದ ಬೆಂಗಳೂರು ಮೂಲದ ಗ್ರಾಹಕರೊಬ್ಬರು ಗೋಡೆಯ ಮೇಲಿನ ಪೇಂಟಿಂಗ್ಸ್‌ಗಳನ್ನು ನೋಡಿ, ಸಹಿಯನ್ನೂ ಗಮನಿಸಿ, ‘ಶಂಕರ್ ಅಂದ್ರೆ ಯಾರು?’ ಅಂತ ಕೇಳಿದರು. ‘ನಾನೇ’ ಅಂತ ಮೆಲ್ಲಗೆ ಹೇಳಿದೆ. ನನ್ನ ಮಾತಿನಿಂದ ಗಲಿಬಿಲಿಗೊಂಡ ಅವರು, ‘ನೀವು ದೊಡ್ಡ ಕಲಾವಿದರಾಗಿ ಬೆಳೆಯಬೇಕಾದವರು. ಹೀಗೆ ಕಟಿಂಗ್ ಮಾಡುತ್ತ ಸಮಯ ಯಾಕೆ ವ್ಯರ್ಥ ಮಾಡುತ್ತಿರುವಿರಿ? ನಿಮಗೆ ದೇವರು ಚಿತ್ರ ಬರೆಯುವ ಶಕ್ತಿ ಕೊಟ್ಟಿದ್ದಾನೆ. ಅದನ್ನು ಸದುಪಯೋಗ ಮಾಡಿಕೊಳ್ಳಿ. ಕಟಿಂಗ್ ಯಾರು ಬೇಕಾದರೂ ಮಾಡಬಹುದು. ಕಲಾವಿದನಾಗೋದು ಎಲ್ಲರಿಂದಲೂ ಸಾಧ್ಯವಿಲ್ಲ, ಕಲೆಯನ್ನು ಬಿಡಬೇಡಿ’ ಎಂದು ಹುರುಪು ತುಂಬುವ ಮಾತನಾಡಿದರು. ಆ ಕ್ಷಣ ಕಲಾವಿದನಾಗಿ ಬದುಕು ರೂಪಿಸಿಕೊಳ್ಳುವ ಮನಸ್ಸಾಯಿತು. ಮತ್ತೆ ಚಿತ್ರಕಲಾಶಾಲೆಯತ್ತ ನಡೆದೆ’.

ಹಳೆಯ ದಿನಗಳನ್ನು ನೆನಪಿಸಿಕೊಳ್ಳುವಾಗ ಹುಬ್ಬಳ್ಳಿಯ ಕಲಾವಿದ ಶಂಕರ ಕಡಕುಂಟಲ ಅವರ ಕಣ್ಣುಗಳಲ್ಲಿ ಹೊಳಪು. ಹಾಂ, ಅವರದ್ದು ಕಲಾವಿದರ ಮನೆತನವೇನಲ್ಲ. ಕುಲಕಸುಬು ಕ್ಷೌರಿಕ ವೃತ್ತಿ. ಆ ವೃತ್ತಿ ಮಾಡುತ್ತಲೇ ಕುಂಚದೊಂದಿಗಿನ ನಂಟನ್ನೂ ಕಡಿದುಕೊಳ್ಳದೇ ದೇಶದ ಹಲವು ಮಹಾನಗರಗಳಲ್ಲಿ ಪ್ರದರ್ಶನಗಳನ್ನು ಮಾಡುತ್ತ, ಕಲಾವಿದರಿಂದ–ವಿಮರ್ಶಕರಿಂದ ಬೆನ್ನು ತಟ್ಟಿಸಿಕೊಂಡಿದ್ದಾರೆ.

‘ಹೆಚ್ಚು ಓದಿದರೆ ಮನೆತನದ ಕೆಲಸ ಮಾಡುವುದಿಲ್ಲ ಎನ್ನುವುದು ಹಿರಿಯರ ನಂಬಿಕೆ. ಹೀಗಾಗಿ ಓದುವುದಕ್ಕಿಂತ ಕುಲಕಸುಬನ್ನು ಮುಂದುವರಿಸುವ ಒತ್ತಡ ಬಹಳವಾಗಿತ್ತು’ ಎನ್ನುವ ಶಂಕರ್ ಅವರಿಗೀಗ ನಲವತ್ತರ ಹರಯ. ಸಲೂನ್‌ನಿಂದ್ ಕಲಾಗ್ಯಾಲರಿ ಸ್ಥಾಪಿಸುವ ಮಟ್ಟಕ್ಕೆ ಸಾಗಿಬಂದ ಹಾದಿಯನ್ನು ಅವರ ಮಾತುಗಳಲ್ಲೇ ಕೇಳಿ.

‘ನಮ್ಮದು ಕ್ಷೌರಿಕ ಕುಟುಂಬ. ನಾನು ಅದೇ ವೃತ್ತಿ ಮುಂದುವರಿಸಬೇಕು ಎನ್ನುವುದು ಮನೆಯವರೆಲ್ಲರ ಆಶಯ. ನೌಕರಿಗೆ ಹೋಗುವುದಾಗಲೀ ಚಿತ್ರ ಬರೆದುಕೊಂಡು ಇರುವುದಾಗಲೀ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಮಕ್ಕಳು ಶಾಲೆಯ ಪರೀಕ್ಷೆಗಳಲ್ಲಿ ಫೇಲ್ ಆಗಬೇಕು ಎಂದೇ ಹರಕೆ ಹೊರುತ್ತಿದ್ದರು. ನಾವು ಕೂಡ ಓದಿನಲ್ಲಿ ಜಾಣರೇನಲ್ಲ. ಬಾಲ್ಯದಿಂದಲೇ ನನಗೆ ಕಲೆಯ ಗೀಳು. ನಮ್ಮ ಅಣ್ಣಂದಿರಂತೂ ಖಡಕ್ ಆಗಿ ಹೇಳಿಯೇ ಬಿಟ್ಟಿದ್ದರು – ‘ನೋಡಪ್ಪಾ, ಮನೆತನದ ವೃತ್ತಿ ನಮಗೆ ಮುಖ್ಯ. ಅದನ್ನು





